

International Journal of Kannada Research
www.kannadajournal.com

**ISSN: 2454–5813**
IJKR 2023; 9(2): 108-113
© 2023 IJKR
www.kannadajournal.com
Received: 05-01-2023
Accepted: 07-03-2023

**ನಾಗರಾಜ ಎನ್**
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕನ್ನಡ ವಿಭಾಗ ಆರ್ ಎನ್ ಎಸ್ ಪ್ರಥಮ ದರ್ಜೆ ಕಾಲೇಜು ಚನ್ನಸಂದ್ರ, ಬೆಂಗಳೂರು, ಕರ್ನಾಟಕ, ಭಾರತ

**Corresponding Author:**
**ನಾಗರಾಜ ಎನ್**
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕನ್ನಡ ವಿಭಾಗ ಆರ್ ಎನ್ ಎಸ್ ಪ್ರಥಮ ದರ್ಜೆ ಕಾಲೇಜು ಚನ್ನಸಂದ್ರ, ಬೆಂಗಳೂರು, ಕರ್ನಾಟಕ, ಭಾರತ

# ‘ಅನುವಾದ ಸಾಹಿತ್ಯ: ಒಂದು ಅವಲೋಕನ’

**ನಾಗರಾಜ ಎನ್**

**ಪೀಠಿಕೆ**
ಭಾಷೆಗಳು ನಿರ್ಮಿಸುವ ಅಡ್ಡಗೋಡೆಗಳನ್ನು ಇಲ್ಲವಾಗಿಸಿ ಜನರನ್ನು ಪರಸ್ಪರ ಹತ್ತಿರ ತರುವ ಸಾಧನವೇ ಭಾಷಾಂತರ ಅಥವಾ ಅನುವಾದ. ಇಂದು ಅನೇಕ ವಿಶ್ವವಿದ್ಯಾಲಯಗಳಲ್ಲಿ ಅನುವಾದ ವಿಶೇಷ ಅಧ್ಯಯನದ ವಿಷಯವಾಗಿದೆ. ರಷ್ಯಾ, ಜಪಾನ್ ಮೊದಲಾದ ಕೆಲವು ಮುಂದುವರಿದ ರಾಷ್ಟ್ರಗಳಲ್ಲಿರುವ ಭಾಷಾಂತರ ಶಾಖೆಗಳು ಕೇವಲ ಮೂವತ್ತು ದಿನಗಳಲ್ಲಿಯೇ ಬೇರೆ ಯಾವುದೇ ಭಾಷೆಯಲ್ಲಿ ಪ್ರಕಟಗೊಂಡ ಮಹತ್ವದ ಕೃತಿಗಳನ್ನು ತಮ್ಮ ಭಾಷೆಗೆ ಅನುವಾದಿಸಿಕೊಳ್ಳುವ ವ್ಯವಸ್ಥೆಯನ್ನು ಹೊಂದಿವೆ. ಈ ಎಲ್ಲಾ ಬೆಳವಣಿಗೆಗಳು ಕಾಲ, ದೇಶ, ಭಾಷೆಗಳನ್ನು ಮೀರಿದ ಅನುವಾದದ ವ್ಯಾಪ್ತಿಯನ್ನು ಸೂಚಿಸುತ್ತವೆ.
**ಉದ್ದೇಶ ಮತ್ತು ವ್ಯಾಪ್ತಿ:** ಯಾವುದೇ ದೇಶದ ಭಾಷೆಯಿರಲಿ ಅದು ಭಾಷಾಂತರ/ಅನುವಾದದ ಮೂಲಕವೇ ಬೆಳೆದಿರುವುದನ್ನು ಹಾಗೂ ಇತರೆ ಭಾಷಿಕ ವಲಯಗಳಲ್ಲಿ ವಿಸ್ತರಿಸಿಕೊಂಡಿರುವುದನ್ನು ಗುರುತಿಸಬಹುದಾಗಿದೆ. ಜಗತ್ತಿನ ಎಲ್ಲಾ ಭಾಷೆ, ಸಾಹಿತ್ಯಗಳನ್ನು ಭಾಷಾಂತರ/ಅನುವಾದದ ಪ್ರಕ್ರಿಯೆ ನಿರಂತರವಾಗಿ ಪೋಷಿಸುತ್ತಲೇ ಬಂದಿದೆ. ಆದರೆ ಇದು ಯಾವ ಪ್ರಮಾಣದಲ್ಲಿ ಯಾವ ಯಾವ ಕಾಲದಲ್ಲಿ ಎಷ್ಟೆಷ್ಟು ನಡೆದಿದೆ ಎಂಬುದರ ನಿಖರ ಮಾಹಿತಿ ಮಾತ್ರ ನಮಗೆ ಇಂದಿಗೂ ಲಭ್ಯವಿಲ್ಲ. ಈ ನಿಟ್ಟಿನಲ್ಲಿ ಪ್ರಯತ್ನಗಳು ಸಾಗಬೇಕಿದೆ.
**ಈಖಓಲಆಖಓಲಉಖ ಂಓಲಆ ಖಓಕಐಖಅಂಖಖಔಓಖ (ಫಲಿತಗಳು)**

- ಅನ್ಯಭಾಷೆ, ಸಂಸ್ಕೃತಿಯ ವಿವರಗಳು ಓದುಗರ ಜ್ಞಾನವಲಯವನ್ನು ವಿಸ್ತರಿಸುವುದರೊಂದಿಗೆ ತಮ್ಮ ನೆಲದ ಸಂಸ್ಕೃತಿ, ಸಾಹಿತ್ಯದ ಜೊತೆಗೆ ತೌಲನಿಕವಾಗಿಯೂ ಒರೆಗೆ ಹಚ್ಚಲು ಪ್ರೇರೇಪಿಸುತ್ತದೆ.
- ಅನುವಾದ ಪ್ರಕ್ರಿಯೆಯಲ್ಲಿ ರೂಪುಗೊಂಡ ಕೃತಿಗಳ, ಅನುವಾದಕರ, ಪ್ರಕಾಶಕರ ಲೆಕ್ಕವೂ ಸಹ ನಿಖರವಾಗಿ ಇಲ್ಲ. ಇದು ಕನ್ನಡವೂ ಒಳಗೊಂಡಂತೆ ಭಾರತದ ಬಹುತೇಕ ಎಲ್ಲಾ ಭಾಷೆಗಳಿಗೆ ಅನ್ವಯವಾಗುವ ಮಾತು.

**ಸಮಾರೋಪ:** ಅನುವಾದಗಳ ಮೂಲಕ ಅನ್ಯಭಾಷಾ ಸಂಸ್ಕೃತಿಗಳ ಸಂಪರ್ಕವೇ ಕಾರಣವಾಗಿ ಭಾಷೆ, ಸಾಹಿತ್ಯಗಳು ಅಭಿವೃದ್ಧಿಯಾಗುತ್ತವೆ. ಯಾವುದೇ ಭಾಷೆಯ ಸಾಹಿತ್ಯ ಸೃಷ್ಟಿಯ ಹಿಂದೆ ಅನ್ಯಭಾಷಾ ಪ್ರಭಾವ ನಿಚ್ಚಳವಾಗಿರುತ್ತದೆ. ಅಲ್ಲದೆ ಒಂದು ಭಾಷೆಯ ಬರವಣಿಗೆಯ ಶೈಲಿ, ವಸ್ತು, ರೂಪಕ್ಕೆ ಸಂಬಂಧಿಸಿದಂತೆ ಇನ್ನೊಂದು ಭಾಷಾ ಕೃತಿಯನ್ನು ಆದರ್ಶವಾಗಿ ಸ್ವೀಕರಿಸಿದ ದೃಷ್ಟಾಂತಗಳು ಕನ್ನಡದಲ್ಲೂ ಇವೆ. ಇವತ್ತಿನ ಸಂದರ್ಭದಲ್ಲಿ ಸಮಗ್ರವಾಗಿ ಕನ್ನಡ ಸಾಹಿತ್ಯವನ್ನು ಅನುವಾದ ಪ್ರಕ್ರಿಯೆ ಪೋಷಿಸಿದ ಬಗೆಯನ್ನು ಕಂಡುಕೊಳ್ಳುವುದು ಅಧ್ಯಯನದ ದೃಷ್ಟಿಯಿಂದ ಅಪೇಕ್ಷಣೀಯ.

**Keywords:** ಭಾಷಾಂತರ ಅಥವಾ ಅನುವಾದ ಸಾಹಿತ್ಯ, ಅನುವಾದ ಪ್ರಕ್ರಿಯೆ, ಮೂಲ ಭಾಷೆ, ಲಕ್ಷ್ಯ ಭಾಷೆ, ಅನುವಾದಕನ ಅರ್ಹತೆಗಳು, ಅನುವಾದದ ತತ್ತ್ವಗಳು, ಅನುವಾದದ ಪ್ರಕಾರಗಳು, ಅನುವಾದದ ಸಮಸ್ಯೆಗಳು

## ಪೀಠಿಕೆ

ಸಾಮಾಜಿಕ ಸಂವಹನಕ್ಕಾಗಿ ಬಳಸಲಾಗುವ ಮೌಖಿಕ ಧ್ವನಿಸಂಕೇತಗಳ ಯಾದೃಚ್ಛಿಕ ವ್ಯವಸ್ಥೆಯನ್ನೇ ‘ಭಾಷೆ’ ಎಂದು ಕರೆಯುತ್ತೇವೆ. ಇಂತಹ ಭಾಷೆಯನ್ನು ನಿಖರವಾಗಿ ನಿಯಮಿತವಾಗಿ ಬಳಸಲು ಕಲಿತ ಮನುಷ್ಯ ತನ್ನ ಆಲೋಚನೆಗಳನ್ನು, ಅನುಭವಗಳನ್ನು ವ್ಯಕ್ತಪಡಿಸಲು ಲಿಪಿಯನ್ನು ರೂಪಿಸಿಕೊಂಡ. ಲಿಪಿಯೊಂದಿಗೆ ಸಾಹಿತ್ಯದ ಸೃಷ್ಟಿಯೂ ಸಾಧ್ಯವಾಯಿತು. ಯಾವುದೇ ಒಂದು ಭಾಷೆಯ ಸಾಹಿತ್ಯವನ್ನು ಅವಲೋಕಿಸಿದಾಗ ಅಲ್ಲಿ ಬೇರೆ ಭಾಷಾ ಸಾಹಿತ್ಯದ ಪ್ರೇರಣೆ, ಪ್ರಭಾವವಿರುವುದು ನಮಗೆ ತಿಳಿಯುತ್ತದೆ. ಈ ನಿಟ್ಟಿನಲ್ಲಿ ಭಾಷಾಂತರ, ಅನುವಾದಗಳು ಬಹಳ ಪ್ರಮುಖ ಪಾತ್ರ ವಹಿಸಿರುವುದು ನಮಗೆ ಗೊತ್ತಾಗುತ್ತದೆ. ಸಾಹಿತ್ಯಕ್ಕೆ ಪೂರಕವಾಗಿ ಅನುವಾದ ಪ್ರಕ್ರಿಯೆಯೂ ನಿರಂತರವಾಗಿ ನಡೆಯುತ್ತಲೇ ಬಂದಿದ್ದು ಭಾಷೆಯ ಚರಿತ್ರೆಯ ಒಳಗಡೆಯೇ ಅನುವಾದ ಸಾಹಿತ್ಯದ ಚರಿತ್ರೆಯೂ ಸೇರಿಕೊಂಡಿದೆ

ಎಂದರೆ ಅತಿಶಯೋಕ್ತಿಯಾಗದು.

ಯಾವುದೇ ದೇಶದ ಭಾಷೆಯಿರಲಿ ಅದು ಭಾಷಾಂತರ/ಅನುವಾದದ ಮೂಲಕವೇ ಬೆಳೆದಿರುವುದನ್ನು ಹಾಗೂ ಇತರೆ ಭಾಷಿಕ ವಲಯಗಳಲ್ಲಿ ವಿಸ್ತರಿಸಿಕೊಂಡಿರುವುದನ್ನು ಗುರುತಿಸಬಹುದಾಗಿದೆ. ಜಗತ್ತಿನ ಎಲ್ಲಾ ಭಾಷೆ, ಸಾಹಿತ್ಯಗಳನ್ನು ಭಾಷಾಂತರ/ಅನುವಾದದ ಪ್ರಕ್ರಿಯೆ ನಿರಂತರವಾಗಿ ಪೋಷಿಸುತ್ತಲೇ ಬಂದಿದೆ. ಆದರೆ ಇದು ಯಾವ ಪ್ರಮಾಣದಲ್ಲಿ ಯಾವ ಯಾವ ಕಾಲದಲ್ಲಿ ಎಷ್ಟೆಷ್ಟು ನಡೆದಿದೆ ಎಂಬುದರ ನಿಖರ ಮಾಹಿತಿ ಮಾತ್ರ ನಮಗೆ ಇಂದಿಗೂ ಲಭ್ಯವಿಲ್ಲ. ಈ ನಿಟ್ಟಿನಲ್ಲಿ ಪ್ರಯತ್ನಗಳು ಆಗಬೇಕಿದೆ. ಗಿಡವೊಂದು ಬೆಳೆದು ಮರವಾಗಿ ಅದು ಬಿಡುವ ಫಲಗಳನ್ನು ಲೆಕ್ಕವಿಡಬಹುದು. ಅವುಗಳ ಗುಣಾವಗುಣಗಳ ಬಗೆಗೆ ಚರ್ಚೆ ಮಾಡಬಹುದು. ಆದರೆ ಗಿಡ ಬೆಳೆಯಲು ಪೋಷಕವಾದ ನೀರು, ಗೊಬ್ಬರ ಹಾಗೂ ಇತರೆ ಪೋಷಕಾಂಶಗಳ ಪ್ರಮಾಣವನ್ನಾಗಲಿ ಉಣಿಸಿದವರನ್ನಾಗಲಿ ಲೆಕ್ಕವಿಟ್ಟವರಿಲ್ಲ. ಹಾಗೆಯೇ ಅನುವಾದ ಪ್ರಕ್ರಿಯೆಯಲ್ಲಿ ರೂಪುಗೊಂಡ ಕೃತಿಗಳ, ಅನುವಾದಕರ, ಪ್ರಕಾಶಕರ ಲೆಕ್ಕವೂ ಸಹ ಇಲ್ಲ. ಇದು ಕನ್ನಡವೂ ಒಳಗೊಂಡಂತೆ ಭಾರತದ ಬಹುತೇಕ ಎಲ್ಲಾ ಭಾಷೆಗಳಿಗೆ ಅನ್ವಯವಾಗುವ ಮಾತು. ಆದರೆ ಅನುವಾದ ಪ್ರಕ್ರಿಯೆಯ ಮೂಲಕ ರೂಪುಗೊಂಡ ವಿಶೇಷ ಸಾಹಿತ್ಯ ಪರಂಪರೆಯನ್ನು ಗುರುತಿಸುವುದು ಸಾಧ್ಯವಿದೆ.

ಸಮಗ್ರವಾಗಿ ಕನ್ನಡ ಸಾಹಿತ್ಯವನ್ನು ಅನುವಾದ ಪ್ರಕ್ರಿಯೆ ಪೋಷಿಸಿದ ಬಗೆಯನ್ನು ಕಂಡುಕೊಳ್ಳುವುದು ಅಧ್ಯಯನದ ದೃಷ್ಟಿಯಿಂದ ಅಪೇಕ್ಷಣೀಯ. ಕೃತಿಯನ್ನು ಓದುವಾಗ ಅನುವಾದ ಎಂದು ನೆನಪಿಸುವಂತಾದರೆ ಅದರಿಂದ ದೊರೆಯಬಹುದಾದ ಸಾಂಸ್ಕೃತಿಕ ತಿಳುವಳಿಕೆಗೂ ಸ್ವತಂತ್ರ ಕೃತಿಯೊಂದರಿಂದ ದೊರೆಯುವ ತಿಳುವಳಿಕೆಗೂ ವ್ಯತ್ಯಾಸವಿರುತ್ತದೆ. ಇದು ಓದುಗರ ಗ್ರಹಿಕೆಗೆ ಸಂಬಂಧಿಸಿದ ವಿಚಾರವೂ ಹೌದು. ಅನ್ಯಭಾಷೆ, ಸಂಸ್ಕೃತಿಯ ವಿವರಗಳು ಓದುಗರ ಜ್ಞಾನವಲಯವನ್ನು ವಿಸ್ತರಿಸುವುದರೊಂದಿಗೆ ತಮ್ಮ ನೆಲದ ಸಂಸ್ಕೃತಿ, ಸಾಹಿತ್ಯದ ಜೊತೆಗೆ ತೌಲನಿಕವಾಗಿಯೂ ಒರೆಗೆ ಹಚ್ಚಲು ಪ್ರೇರೇಪಿಸುತ್ತದೆ.

'ಅನುವಾದ' ಎಂಬ ಶಬ್ದವು 'ವದ್'ಎಂಬ ಧಾತುವಿಗೆ 'ಅನು' ಎಂಬ ಉಪಸರ್ಗ ಸೇರಿ 'ಅನುವಾದ' ಎಂಬ ಪದವು ನಿಷ್ಪತ್ತಿಯಾಗಿದೆ. ಅನುವಾದ ಎಂದರೆ ಈ ಹಿಂದೆ ಹೇಳಿದ್ದನ್ನು ಇನ್ನೊಮ್ಮೆ ಹೇಳುವುದು. ಅಂದರೆ ಬೇರೊಬ್ಬರು ಹೇಳಿದ್ದನ್ನು ಅನುಸರಿಸಿ ಹೇಳುವುದು. ಒಂದು ಭಾಷೆಯಲ್ಲಿ ರಚನೆಯಾಗಿರುವ ಸಾಹಿತ್ಯವನ್ನು ಬಹುಮುಖಿ ದೃಷ್ಟಿಕೋನಗಳಲ್ಲಿ ಅಧ್ಯಯನ ಮಾಡುವುದೇ ಅನುವಾದ ಎಂದು ಕರೆಯಬಹುದು. ಭಾಷಾಂತರ/ಅನುವಾದ/ತರ್ಜುಮೆ ಎಂಬುದು ಒಂದು ಕಲೆ. ಸಾಹಿತಿಯ ಕಾರ್ಯ 'ಸೃಷ್ಟಿ'ಯಾದರೆ ಅನುವಾದಕನ ಕಾರ್ಯವನ್ನು 'ಪುನರ್‌ಸೃಷ್ಟಿ' ಎಂದು ಕರೆಯುವುದು ಸೂಕ್ತ. ಸೃಷ್ಟಿಯಾದ ಸಾಹಿತ್ಯದ ಮೂಲಕ ಓದುಗರ ಮನಸೆಳೆಯುವಂತೆ, ಅನುವಾದಗೊಂಡ ಸಾಹಿತ್ಯವು ಲಕ್ಷ್ಯ ಭಾಷೆಯ ಓದುಗರ ಮನಸೆಳೆಯಬೇಕು, ಇಲ್ಲವಾದಲ್ಲಿ ಅದು ವಿಫಲವಾಗುತ್ತದೆ.

**ಅನುವಾದದ ವ್ಯಾಖ್ಯೆಗಳು**

ಕೆ ಎಸ್ ನಿಸಾರ್ ಅಹಮದ್ ಅವರು ತಿಳಿಸಿದಂತೆ "ವಿದ್ಯುತ್ ದೀಪದ ಗೈರು ಹಾಜರಿಯಲ್ಲಿ ಕತ್ತಲೆ ಅನುಭವಿಸುವುದರ ಬದಲು ಮೇಣದ ಬತ್ತಿಯಾದರೂ ಲಭ್ಯವಿದೆಯೆಂದು ಸಮಾಧಾನಪಡುವಂತೆ ಸೃಜನಶೀಲ ಸಾಹಿತ್ಯದ ಗೈರು ಹಾಜರಿಯಲ್ಲಿ ಅಜ್ಞಾನವನ್ನು ಹೋಗಲಾಡಿಸಲು ಪರ್ಯಾಯವಾಗಿ ನಿರ್ಮಿಸಿಕೊಂಡ ಮಾರ್ಗವೇ ಅನುವಾದ"ವಾಗಿದೆ.

**ಡಿವಿಜಿ**ಯವರ ಮಾತಿನಲ್ಲೇ ಹೇಳುವುದಾದರೆ "ಸ್ವತಂತ್ರ ಕಾವ್ಯದ ಪೈರು ಹುಟ್ಟುವುದಕ್ಕೆ ಮೊದಲು ನಡೆದಿರಬೇಕಾದ ಉಳುಮೆಯ ಕೆಲಸವೇ ತರ್ಜುಮೆ/ಅನುವಾದ".

**ಕ್ಯಾಟ್‌ಪರ್ಡ್** ರವರ ಪ್ರಕಾರ "ಮೂಲಭಾಷೆಯ ಪಠ್ಯಸಾಮಾಗ್ರಿಯನ್ನು ಉದ್ದಿಷ್ಟ ಭಾಷೆಯ ಪಠ್ಯ ಸಾಮಗ್ರಿಯನ್ನಾಗಿ ಪರಿವರ್ತಿಸುವುದೇ ಅನುವಾದ".

**ಹಂಬೋಲ್ಟ್** ರವರ ಪ್ರಕಾರ ನಿಜವಾದ ಅನುವಾದ ಎಂದರೆ "ಅಸಾಧ್ಯ ಸಮಸ್ಯೆಯೊಂದನ್ನು ಬಿಡಿಸುವ ಪ್ರಯತ್ನ. ಆದರೆ ಅದೇ ಕೊನೆಯ ಸತ್ಯವಲ್ಲ. ಉತ್ತಮ ಭಾಷಾಂತರಕ್ಕೆ ಮುಖ್ಯವಾದ ಓರೆಗಲ್ಲೆಂದರೆ ಅದನ್ನು ಓದುವಾಗ ಅದು ಸ್ವಾಭಾವಿಕವಾಗಿ ಕಾಣುವುದು".

ವಿಲಮೋವಿಟ್ಜ ರವರ ಪ್ರಕಾರ "True translation is metempsychosis an odd" 'ಮರಣದ ನಂತರ ಆತ್ಮ ಮತ್ತೊಂದು ಶರೀರವನ್ನು ಪ್ರವೇಶಿಸುವುದು'. ಅಂದರೆ ಪರಕಾಯ ಪ್ರವೇಶ, ಇದು ಲೇಖಕ ಅನುವಾದಕನ ನಡುವೆ ಏರ್ಪಡುವ ಒಪ್ಪಂದ ಎಂದೇ ಹೇಳಬಹುದು.

ಒಂದು ಭಾಷೆಯ ಸಂಕೇತಾರ್ಥಗಳನ್ನು ಇನ್ನೊಂದು ಭಾಷೆಯ ಸಂಕೇತಾರ್ಥಗಳನ್ನಾಗಿ ಪರಿವರ್ತಿಸುವುದೇ ಭಾಷಾಂತರ. ಭಾಷಾಂತರ ಎಂದರೆ "ಎರಡು ಭಾಷೆಗಳ ನಡುವೆ ನಡೆಯುವ ವ್ಯವಹಾರ" ಎಂದು ಕೀರ್ತಿನಾಥ ಕುರ್ತುಕೋಟಿ ವ್ಯಾಖ್ಯಾನಿಸಿದ್ದಾರೆ.

'ಅವಳ ತೊಡುಗೆ ಇವಳಗಿಟ್ಟು ನೋಡ ಬಯಸಿದೆ. ಇವಳ ತೊಡುಗೆ ಅವಳಗಿಟ್ಟು ಹಾಡ ಬಯಸಿದೆ' – ಬಿಎಂಶ್ರೀ

"ಭಾಷಾಂತರ ಸೋಮಾರಿಗಳ ಕೆಲಸವಲ್ಲ, ಅದು ಪ್ರತಿಭಾವಂತರು ಕೈಗೊಳ್ಳಬೇಕಾದ ಕಾರ್ಯ" – ದೇಜಗೌ

ಅನುವಾದ ಕ್ರಿಯೆ ಒಂದು ಪ್ರಯೋಗ ಮಾತ್ರವಲ್ಲ. ಅದು ಎರಡು ಭಾಷಿಕ ಸಮುದಾಯಗಳ ನಡುವೆ ಕಟ್ಟಿದ ಸೇತುವೆ – ಸಿ ಎನ್ ರಾಮಚಂದ್ರನ್

ಅನುವಾದ ಎಂದರೆ ಮೂಲ ಲೇಖಕ ಮತ್ತು ಅನುವಾದಕ ಭೇಟಿಯಾಗುವ ಒಂದು ಸಂಧಿಬಿಂದು –ರಾಮಚಂದ್ರದೇವ

ಅನುವಾದದ ಕೆಲಸ ಮೂಲ ಕೃತಿ ರಚನೆಯಷ್ಟೇ ಸೃಜನಶೀಲ ಕೆಲಸ. ಒಳ್ಳೆಯ ಅನುವಾದಗಳು ತಮ್ಮಷ್ಟಕ್ಕೆ ಗಮನ ಸೆಳೆಯುತ್ತವೆ – ಗುರುಮೂರ್ತಿ ಪೆಂಡಕೂರು

ಒಂದು ಸಂಸ್ಕೃತಿಯ ಸಾಹಿತ್ಯ ಇನ್ನೊಂದು ಸಂಸ್ಕೃತಿಯನ್ನು ಪ್ರವೇಶಿಸುವುದಕ್ಕೆ ಭಾಷಾಂತರ ಎನ್ನಬಹುದು. ಆ ಮೂಲಕ ಅದು ಸ್ವತಂತ್ರ ಸಾಹಿತ್ಯಗಳಿಗೆ ದಾರಿ ಮಾಡಿಕೊಡುತ್ತದೆ – ಕಲಬುರ್ಗಿ ಎಂ ಎಂ

ಕುವೆಂಪುರವರ ಪ್ರಕಾರ "ಭಾಷಾಂತರವು ಆತ್ಮದಿಂದ, ಮನಸಿನಿಂದ ಹುಟ್ಟಿದ ಭಾವನೆಗಳ ಅಭಿವ್ಯಕ್ತಿಯಾಗಿದೆ. ಇದು ಭಾಷೆ ಮತ್ತು ಭಾವನೆ ಇವುಗಳೆರಡರ ಮಧ್ಯೆ ನಡೆಯುವ ಪ್ರಕ್ರಿಯೆಯಾಗಿದೆ. ಅಮೂರ್ತದಿಂದ ಮೂರ್ತದ ಕಡೆಗೆ ನಡೆಯುವ ಕಾರ್ಯ. ಇದು ರೂಪ–ರೂಪಗಳನ್ನು ದಾಟಿ ರೂಪಾಂತರವನ್ನು ಹೊಂದಿ, ನಾಮಕೋಟಿಗಳನ್ನು ಮೀಟಿ–ಭಾಷೆಗಳ ನಡುವಿನ ಗೋಡೆಯನ್ನು ಮೀರಿ, ಎದೆಯ ಬಿರಿಯ ಭಾವ ದೀಟಿ–ಭಾವಾಂತರವನ್ನು ಹೊಂದಿ, ಭಾಷಾಂತರ ಎನ್ನುವ ಚೇತನವು ಅನಿಕೇತನವಾಗಿ ಬೆಳೆಯುತ್ತದೆ".

ಒಟ್ಟಾರೆ ಈ ವ್ಯಾಖ್ಯಾನಗಳನ್ನು ಗಮನಿಸಿದಾಗ ಅನುವಾದವು ಮೂಲ ಸೃಷ್ಟಿಯ ಪುನಸೃಷ್ಟಿ, ಅನುವಾದಕನ ಸೃಜನಶೀಲತೆಗೆ ಸವಾಲಾಗಿ ಗುರುತಿಸಿಕೊಂಡಿದೆ. ಸಾಹಿತ್ಯ ಪ್ರಕಾರಗಳಲ್ಲಿ ಕಂಡು

ಬಂದ ಅನುವಾದದ ಸ್ವರೂಪವನ್ನು ಗುರುತಿಸುವುದಾದರೆ – ಕಾವ್ಯದಲ್ಲಿ ಅನುವಾದ, ನಾಟಕ ಸಾಹಿತ್ಯದ ಅನುವಾದ, ಕಾದಂಬರಿ ಸಾಹಿತ್ಯದ ಅನುವಾದ, ಸಣ್ಣಕತೆ ಸಾಹಿತ್ಯದ ಅನುವಾದ ಎಂದು ಗುರುತಿಸಬಹುದು.

**ಅನುವಾದದ ವ್ಯಾಪ್ತಿ ಮತ್ತು ಮಹತ್ವ**

ಭಾಷೆಗಳು ನಿರ್ಮಿಸುವ ಅಡ್ಡಗೋಡೆಗಳನ್ನು ಇಲ್ಲವಾಗಿಸಿ ಜನರನ್ನು ಪರಸ್ಪರ ಹತ್ತಿರ ತರುವ ಸಾಧನವೇ ಭಾಷಾಂತರ ಅಥವಾ ಅನುವಾದ. ಇಂದು ಅನೇಕ ವಿಶ್ವವಿದ್ಯಾಲಯಗಳಲ್ಲಿ ಅನುವಾದ ವಿಶೇಷ ಅಧ್ಯಯನದ ವಿಷಯವಾಗಿದೆ. ರಷ್ಯಾ, ಜಪಾನ್ ಮೊದಲಾದ ಕೆಲವು ಮುಂದುವರಿದ ರಾಷ್ಟ್ರಗಳಲ್ಲಿರುವ ಭಾಷಾಂತರ ಶಾಖೆಗಳು ಮೂವತ್ತು ದಿನಗಳಲ್ಲಿ ಬೇರೆ ಯಾವುದೇ ಭಾಷೆಯಲ್ಲಿ ಪ್ರಕಟವಾದ ಮಹತ್ವದ ಕೃತಿಗಳನ್ನು ತಮ್ಮ ಭಾಷೆಗೆ ಅನುವಾದಿಸಿಕೊಳ್ಳುವ ವ್ಯವಸ್ಥೆಯನ್ನು ಹೊಂದಿವೆ. ಈ ಎಲ್ಲಾ ಬೆಳವಣಿಗೆಗಳು ಕಾಲ, ದೇಶ, ಭಾಷೆಗಳನ್ನು ಮೀರಿದ ಅನುವಾದದ ವ್ಯಾಪ್ತಿಯನ್ನು ಸೂಚಿಸುತ್ತವೆ.

ಅನುವಾದ ಎಂದರೆ ಗ್ರಹಿಕೆಯ ಒಂದು ಕ್ರಮ. ಯಾವಾಗಲೂ ಅನುವಾದ ಅಪರಿಚಿತವಾದ ಭಾಷೆಯಿಂದ ಪರಿಚಿತವಾದ ಭಾಷೆಯ ಓದುಗರನ್ನು ಗುರಿಯಾಗಿಸಿಕೊಂಡೇ ನಡೆಯುತ್ತಿರುತ್ತದೆ. ಗೊತ್ತಿರುವ ಭಾಷೆಯೊಂದರಿಂದ ಗೊತ್ತಿಲ್ಲದವರಿಗೆ ಗೊತ್ತಾಗುವ ಭಾಷೆಯಲ್ಲಿ ಹೇಳುವುದು ಅನುವಾದ. ಹಾಗೆ ಗೊತ್ತಿರುವ ಭಾಷೆಯೊಂದರಿಂದ ಅನುವಾದ ಮಾಡುವವರು ಮೊದಲು ಅನುವಾದ ಮಾಡಬೇಕಾದ ವಿಷಯವನ್ನು ತಿಳಿಯಬೇಕಾಗುತ್ತದೆ. ಗ್ರಹಿಕೆ ಎಂಬುದು ಎಲ್ಲಾ ಓದುಗರಿಗೂ ಇರಬೇಕಾಗುತ್ತದೆ. ಓದಿದ್ದನ್ನು ತಮ್ಮ ತಮ್ಮ ಗ್ರಹಿಕೆಗೆ ಅನುಗುಣವಾಗಿ ಅರ್ಥೈಸಿಕೊಳ್ಳುತ್ತಾರೆ. ಹಾಗೇ ಅರ್ಥೈಸಿಕೊಂಡಿದ್ದನ್ನು ಇನ್ನೊಬ್ಬರಿಗೆ ತಿಳಿಸುವ ಸಲುವಾಗಿ ಹೇಳಿದಾಗ ಭಾಷಾಂತರ ರೂಪುಗೊಳ್ಳುತ್ತದೆ. ಇನ್ನೂ ಸರಳವಾಗಿ ಹೇಳಬೇಕೆಂದರೆ ಗೊತ್ತಿಲ್ಲದೆ ಇರುವ ವಿಷಯವನ್ನು ಗೊತ್ತಾಗುವ ಭಾಷೆಗೆ ಬದಲಾಯಿಸುವುದೇ ಅನುವಾದ. ಆಕರ ಭಾಷೆಯಲ್ಲಿ ಓದಿದ ಪಠ್ಯವನ್ನು ಅನುವಾದಕರು ತಮ್ಮ ಬೌದ್ಧಿಕ ಪರಿಮಿತಿಗೆ ಅನುಗುಣವಾಗಿ ಗ್ರಹಿಸಿಕೊಳ್ಳಬಹುದು.

ಷೇಕ್ಸ್‌ಪಿಯರ್‌ನ ಭಾಷಾಂತರಗಳು ಕನ್ನಡದಲ್ಲಿ ಅನೇಕ ಇವೆ. ಷೇಕ್ಸ್‌ಪಿಯರ್ ಇಂಗ್ಲಿಷ್‌ನಲ್ಲಿ ಕೃತಿಗಳನ್ನು ರಚಿಸಿದ ಕಾಲಕ್ಕೂ ಅವುಗಳ ಭಾಷಾಂತರಗಳು ಪ್ರಪಂಚದ ಬೇರೆ ಬೇರೆ ಭಾಷೆಗಳಲ್ಲಿ ರೂಪುಗೊಂಡಿರುವುದಕ್ಕೂ ಇದುವೇ ಕಾರಣ, ಷೇಕ್ಸ್‌ಪಿಯರ್‌ನ ಕೃತಿಗಳು ಅದು ಓದಿನ ಪಠ್ಯವಾಗಿ, ರಂಗಪಠ್ಯವಾಗಿ, ಕತೆಯಾಗಿ ಹೀಗೆ ಅನೇಕ ವಿಧದಲ್ಲಿ ಲಕ್ಷ್ಯಭಾಷೆಯನ್ನು ತಲುಪಿವೆ. ಹಾಗೆಯೇ ಆಯಾ ಭಾಷೆಯ ಸಂಸ್ಕೃತಿಗೆ ಅನುಗುಣವಾದ ಪುನರ್ ಸೃಷ್ಟಿಯಾಗಿಯೂ ಅಭಿವ್ಯಕ್ತಿ ಪಡೆದಿವೆ. ಹಾಗಾಗಿ ಆಕರ ಭಾಷೆಯ ಕೃತಿಯನ್ನು ಲಕ್ಷ ಭಾಷೆಯ ಅಗತ್ಯಕ್ಕೆ ಅನುಗುಣವಾಗಿ ಬದಲಾಯಿಸಿಕೊಳ್ಳುವ ಕ್ರಿಯೆಯೂ ಭಾಷಾಂತರದ ಒಂದು ಬಗೆಯೇ ಆಗಿದೆ.

ಇಂಗ್ಲಿಷಿನ Translalion ಎಂಬ ಪದಕ್ಕೆ ಸಂವಾದಿಯಾಗಿ ಅನುವಾದ, ಭಾಷಾಂತರ, ತರ್ಜುಮೆ, ಪರಿವರ್ತನೆ ಮುಂತಾದ ಪದಗಳನ್ನು ಸಮಾನಾರ್ಥದಲ್ಲಿ ಬಳಸಲಾಗುತ್ತಿದೆ. ಹಾಗೆಯೇ ಕನ್ನಡದಲ್ಲಿ ಬರೆ, ಕನ್ನಡೀಕರಿಸು ಎಂಬ ಪದಗಳು ಕನ್ನಡ ಭಾಷೆಯಲ್ಲಿ ಬಳಕೆಯಾಗುತ್ತಿವೆ. ಇದರ ಜೊತೆಗೆ ರೂಪವನ್ನು ಬದಲಾವಣೆ ಮಾಡಿದ ಅನುವಾದಗಳನ್ನು 'ರೂಪಾಂತರ' ಎಂದು ಕರೆಯಲಾಗಿದೆ. ಅನುವಾದ ಅಥವಾ ಭಾಷಾಂತರ ಏನಿದ್ದರೂ ಅದು ಆಧುನಿಕ ಪರಿಭಾಷೆ. ಅದೂ ಸಹ ವಸಾಹತು ಕಾಲಘಟ್ಟದಲ್ಲಿ ಚಾಲ್ತಿಗೆ ಬಂದ ಪದ. ಅನುವಾದ ಎಂಬ ಪದ ಆಧುನಿಕ ಸಂದರ್ಭದಲ್ಲಿ ಚಾಲ್ತಿಗೆ ಬಂದರೂ ಈ ಪ್ರಕ್ರಿಯೆ ಮಾತ್ರ ಪ್ರಾಚೀನವಾದುದು. ಭಾಷೆ ಹುಟ್ಟಿದಂದಿನಿಂದಲೇ ಭಾಷಾಂತರ ಅಥವಾ ಅನುವಾದವು ಹುಟ್ಟಿಕೊಂಡಿತು.

ಭಾಷಾಂತರ, ಅನುವಾದ, ರೂಪಾಂತರ – ಈ ಶಬ್ದಗಳು ತಮ್ಮದೇ ಆದ ಅರ್ಥವ್ಯಾಪ್ತಿಯನ್ನು ಹೊಂದಿವೆ. ಒಂದು ಭಾಷೆಯಲ್ಲಿ ನಿರೂಪಿತವಾದ ಭಾವನೆ, ವಿಚಾರ, ಅನುಭವಗಳನ್ನು ಇನ್ನೊಂದು ಭಾಷೆಗೆ ಬದಲಾಯಿಸಿದಾಗ ಅದು ಭಾಷಾಂತರ ಎನ್ನಿಸಿಕೊಳ್ಳುತ್ತದೆ. ಅನುವಾದವು ಒಂದು ಅಪೂರ್ವವಾದ, ಮಹತ್ವವಾದ, ವಿಶಿಷ್ಟವಾದ ಕಲೆ. ಒಂದು ಜನಾಂಗದ ಬದುಕಿಗೆ ಹೊಸ ಆಯಾಮವನ್ನು ನೀಡಬಲ್ಲುದು. ಸಾಂಸ್ಕೃತಿಕ ವಾಹಿನಿಯಾಗಿ ಅನುವಾದ ಸಾಹಿತ್ಯ ಬೀರುವ ಪರಿಣಾಮ ಅಮೋಘವಾದುದು. ಇನ್ನೊಂದು ದೃಷ್ಟಿಯಿಂದ ಅದು ಸಂವೇದನಾಶೀಲ ಸಮಾಜವೊಂದರ ಪ್ರಗತಿಗೆ ಅಗತ್ಯವಾಗಿದೆ. ಯಾವುದೇ ಭಾಷೆಯ ಸೃಜನಶೀಲ ಕೃತಿಯು ಆಕರವಾಗಿ ಅದೇ ಭಾಷೆಯ ಅಥವಾ ಅನ್ಯಭಾಷಾ ಕೃತಿಗಳನ್ನು ಬಳಸಿಕೊಂಡಿರುವುದಕ್ಕೆ ಸಾಕಷ್ಟು ನಿದರ್ಶನಗಳು ದೊರೆಯುತ್ತವೆ. ಯಾವುದೇ ಭಾಷೆಯಲ್ಲಿ ಸಾಹಿತ್ಯ ಬೆಳೆಯಬೇಕಾದರೆ ಅನುವಾದ ಅಥವಾ ಭಾಷಾಂತರದ ನೆರವು ಅತ್ಯಗತ್ಯ. ಇದು ಎಲ್ಲ ಶಾಸ್ತ್ರಗಳಿಗೂ ಜೀವನದಿಯಂತಿದೆ ಎಂದರೆ ತಪ್ಪಾಗಲಾರದು. ಅದಕ್ಕೆ ಯಾವುದೇ ಎಲ್ಲೆಯೆಂಬುದಿಲ್ಲ. ಅನುವಾದದ ಮೂಲಕ ಪಾಶ್ಚಾತ್ಯ ಶಿಕ್ಷಣ–ಸಾಹಿತ್ಯದ ಪರಿಚಯವಾಗಿ ನಮ್ಮ ಸಾಹಿತ್ಯ ವಲಯದಲ್ಲಿ ಹೊಸ ಹೊಸ ಆಲೋಚನೆಗಳು ಚಿಗುರೊಡೆದದ್ದು ಈಗ ಇತಿಹಾಸ. ಕನ್ನಡ ಸಾಹಿತ್ಯವು ಅನ್ಯಭಾಷಾ ಸಾಹಿತ್ಯದ ಬೆಳಕಿನಲ್ಲಿ ಇದುವರೆಗೆ ಬೆಳೆದು ಬಂದಿರುವುದೇ ಇದಕ್ಕೆ ಪ್ರತ್ಯಕ್ಷ ಸಾಕ್ಷಿ. ಕನ್ನಡ ಸಾಹಿತ್ಯದ ಏಳು ಬೀಳುಗಳ ಹಿಂದೆ ಅನುವಾದ ಪ್ರಕ್ರಿಯೆಯ ಸ್ಫೂರ್ತಿ ಚೈತನ್ಯವಿತ್ತು. ಹೊಸ ಹೊಸ ಆಯಾಮಗಳತ್ತ ಹೊರಳಿಕೊಂಡ ಕನ್ನಡ ಸಾಹಿತ್ಯದಲ್ಲಿ ಅನ್ಯಭಾಷಾ ಸಾಹಿತ್ಯದ ಸತ್ವವನ್ನು, ಅದರ ಛಾಯೆಯನ್ನು ಎಲ್ಲಾ ಕಾಲಘಟ್ಟದ ರಚನೆಗಳಲ್ಲಿಯೂ ಗುರುತಿಸಬಹುದು. ಕೃತಿಯೊಂದರ ರಚನೆಯ ಹಿಂದೆ ಪ್ರೇರಣಾ ರೂಪದಲ್ಲಿಯೋ ಪ್ರಚೋದನೆಯ ರೂಪದಲ್ಲಿಯೋ ಅನ್ಯಭಾಷಾ ಸಾಹಿತ್ಯ ಇರುವುದು ಕನ್ನಡ ಸಾಹಿತ್ಯ ಚರಿತ್ರೆಯನ್ನು ಗಮನಿಸಿದರೆ ಸ್ಪಷ್ಟವಾಗುವ ಸಂಗತಿ. ಆದರೆ ಇದನ್ನು ಸಾಧ್ಯ ಮಾಡಿಸಿದ ಅನುವಾದ ಪ್ರಕ್ರಿಯೆಯನ್ನು ಸಾಹಿತ್ಯ ಚರಿತ್ರೆಗಳು ತೀರಾ ನಿರ್ಲಕ್ಷ್ಯ ಮಾಡಿರುವುದು ತಿಳಿಯುತ್ತದೆ.

ಅನುವಾದಗಳ ಮೂಲಕ ಅನ್ಯಭಾಷಾ ಸಂಸ್ಕೃತಿಗಳ ಸಂಪರ್ಕವೇ ಕಾರಣವಾಗಿ ಭಾಷೆ, ಸಾಹಿತ್ಯಗಳು ಅಭಿವೃದ್ಧಿಯಾಗುತ್ತವೆ. ಯಾವುದೇ ಭಾಷೆಯ ಸಾಹಿತ್ಯ ಸೃಷ್ಟಿಯ ಹಿಂದೆ ಅನ್ಯಭಾಷಾ ಪ್ರಭಾವ ನಿಚ್ಚಳವಾಗಿರುತ್ತದೆ. ಅಲ್ಲದೆ ಒಂದು ಭಾಷೆಯ ಬರವಣಿಗೆಯ ಶೈಲಿ, ವಸ್ತು, ರೂಪಕ್ಕೆ ಸಂಬಂಧಿಸಿದಂತೆ ಇನ್ನೊಂದು ಭಾಷಾ ಕೃತಿಯನ್ನು ಆದರ್ಶವಾಗಿ ಸ್ವೀಕರಿಸಿದ ದೃಷ್ಟಾಂತಗಳು ಕನ್ನಡದಲ್ಲಿ ಇವೆ.

ಕನ್ನಡ ಅನುವಾದ ಪರಂಪರೆಯ ಪ್ರಾಚೀನತೆಯನ್ನು ಕನ್ನಡ ಭಾಷೆಯ ಪ್ರಾಚೀನದ ಜೊತೆಗೆ ಗುರುತಿಸಬಹುದಾಗಿದೆ. ಕನ್ನಡದ ಮೌಖಿಕ ಪರಂಪರೆಯಲ್ಲಿಯೇ ಅನುವಾದಗಳು ಆರಂಭವಾಗಿರಬೇಕು. ಕನ್ನಡನಾಡನ್ನು ಆಳಿದ ಇತರೆ ಭಾಷಿಕ ಜನರು ಸ್ಥಳೀಯರೊಡನೆ ವ್ಯವಹರಿಸುವಲ್ಲಿ ಮೌಖಿಕ ಅನುವಾದ ಪ್ರಕ್ರಿಯೆಗಳು ನಡೆದಿರುತ್ತದೆ. ಹಾಗೆಯೇ ಕನ್ನಡ ನಾಡಿಗೆ ಬಂದ ವ್ಯಾಪಾರಿಗಳು, ಯಾತ್ರಾರ್ಥಿಗಳು ಹೀಗೆ ಎಲ್ಲರೂ ಅನುವಾದ ಪ್ರಕ್ರಿಯೆಯ ಮೂಲಕ ವ್ಯವಹರಿಸಿದ್ದಾರೆ ಎನ್ನುವುದರಲ್ಲಿ ಸಂದೇಹವಿಲ್ಲ. ಹಾಗೆಯೇ ಸ್ಥಳೀಯವಾಗಿ ಬಹುಭಾಷಿಕ ಪ್ರದೇಶಗಳಲ್ಲಿ ನೆಲೆಸಿರುವ ಅನೇಕ ಕುಟುಂಬಗಳು ವೈವಾಹಿಕ ಸಂಬಂಧಗಳ ಮೂಲಕ ಎರಡು ಭಾಷೆಗಳ ಸಂಬಂಧಗಳಿಗೆ,

ಮೌಖಿಕ ಅನುವಾದಗಳಿಗೆ ಕಾರಣವಾಗಿರಬಹುದು. ಕನ್ನಡ ರಾಜರುಗಳು ರಾಜ್ಯ ವಿಸ್ತರಣೆಯ ಹೆಸರಲ್ಲಿ ದಿಗ್ವಿಜಯಕ್ಕೆ ಇತರ ಭಾಷಿಕರ ರಾಜ್ಯಕ್ಕೆ ದಂಡೆತ್ತಿ ಹೋಗುವುದು, ಅಲ್ಲಿ ವೈವಾಹಿಕ ಸಂಬಂಧ ಬೆಸೆಯುವುದು, ಹಾಗೆಯೆ ಕನ್ನಡ ನಾಡಿಗೆ ದಂಡೆತ್ತಿ ಬಂದ ರಾಜರು ಕನ್ನಡ ನಾಡಿನಲ್ಲಿ ವೈವಾಹಿಕ ಸಂಬಂಧ ಬೆಳೆಸಿ ಮರಳುವುದು ಇತ್ಯಾದಿಗಳು ನಡೆದಿರುವುದಕ್ಕೆ ಇತಿಹಾಸದಲ್ಲಿ ದಾಖಲೆಗಳಿವೆ. ಹೀಗೆ, ರಾಜ್ಯ ರಾಜ್ಯಗಳ ನಡುವೆ ನಡೆಯುವ ಬಹುಭಾಷಾ ಸಂಪರ್ಕ, ವೈವಾಹಿಕ ಸಂಬಂಧಗಳ ಮೂಲಕ ನಡೆಯುವ ದ್ವಿಭಾಷಾ ಸಂಸರ್ಗ, ಅನ್ಯಭಾಷಿಕರು ಸ್ಥಳೀಯರೊಡನೆ ಹೊಂದಿದ ವ್ಯಾಪಾರ, ವ್ಯವಹಾರಗಳ ಸಾಮಾಜಿಕ ಸಂಬಂಧ ಹೀಗೆ ಎಲ್ಲೆಡೆಯೂ ಅನುವಾದ ಪ್ರಕ್ರಿಯೆ ಸುಪ್ತವಾಗಿ ಅಪ್ರಜ್ಞಾಪೂರ್ವಕವಾಗಿ ನಡೆದಿದೆ ಎನ್ನುವುದು ವಾಸ್ತವ.

**ಅನುವಾದಕನ ಅರ್ಹತೆಗಳು**

ಮೂಲ ಕೃತಿಯಲ್ಲಿರುವ ಸ್ವಾರಸ್ಯ, ವೈಶಿಷ್ಟ್ಯಗಳು ಅನುವಾದ ಕೃತಿಯಲ್ಲಿಯೂ ಬರುವಂತೆ ನೋಡಿಕೊಳ್ಳುವುದು ಅಷ್ಟು ಸುಲಭದ ಕೆಲಸವಲ್ಲ. ಅದಕ್ಕೆ ಅನುವಾದಕನಿಗೆ ಕೆಲವು ಅರ್ಹತೆಗಳು ಇರಬೇಕಾಗುತ್ತದೆ –

1. ಮೂಲ ಮತ್ತು ಉದ್ದಿಷ್ಟ ಭಾಷೆಗಳ ಮೇಲೆ ಜ್ಞಾನವಿರಬೇಕು, ಪ್ರಭುತ್ವವಿರಬೇಕು.
2. ಯಾವುದೇ ವಿಷಯದ ಪರಿಜ್ಞಾನ ಇರಬೇಕು.
3. ಯಾವುದೇ ವಿಚಾರ ಕುರಿತು ಪೂರ್ವಾಗ್ರಹ ಮುಕ್ತನಾಗಿರಬೇಕು.
4. ಸದಾ ಶ್ರಮ ಸಹಿಷ್ಣುವಾಗಿರಬೇಕು
5. ಅನುವಾದಕ ತನ್ನತನವನ್ನು ಮರೆತು ಕೃತಿಯಲ್ಲಿ ಲೀನನಾಗಿರಬೇಕು.

ಇಂತಹ ಗುಣಗಳಿದ್ದಾಗ ಅನುವಾದ ಆದರ್ಶ ಅನುವಾದವಾಗುತ್ತದೆ.

**ಅನುವಾದದ ತತ್ತ್ವಗಳು**

ಅನುವಾದದ ಕ್ಷೇತ್ರದಲ್ಲಿ ಅಧಿಕಾರವಾಣಿ ಎಂಬುದಾಗಿ ಪರಿಗಣಿಸಲಾಗಿರುವ ಜೆ. ಪಿ. ಪೋಸ್ಟ್‌ಗೇಟ್

1. ವಿಧೇಯತಾ ತತ್ತ್ವ
2. ಆನಂದ ತತ್ತ್ವ
3. ಅನುರೂಪತಾ ತತ್ತ್ವ
4. ಪರಿಹಾರ ತತ್ತ್ವ
5. ಮೂಲಾಭಾಸ ತತ್ತ್ವ
6. ಇವು ಅನುವಾದದ ಪಂಚಸೂತ್ರಗಳೆಂದು ಹೇಳಿದ್ದಾನೆ.

**೧. ವಿಧೇಯತಾ ತತ್ತ್ವ**

ಇದನ್ನು ಅನುವಾದಕನ ಮೊಟ್ಟಮೊದಲ ಐತಿಹಾಸಿಕ ಕರ್ತವ್ಯವೆಂದು ಹೇಳಲಾಗಿದೆ. ಅನುವಾದಕ ಮೂಲದ ಭಾಷೆಗೆ ಮಾತ್ರ ವಿಧೇಯನಾಗಿದ್ದರೆ ಸಾಲದು. ಉದ್ದಿಷ್ಟ ಭಾಷೆಯ ಜಾಯಮಾನಕ್ಕೂ ಅವನು ವಿಧೇಯನಾಗಿರಬೇಕು. ಇಲ್ಲವಾದರೆ, ಮೂಲದ ಬಗೆಗಿನ ಅತಿಯಾದ ವಿಧೇಯತೆ ಅವಿಧೇಯತೆಯೇ ಆಗಿಬಿಡುವ ಅಪಾಯವಿರುತ್ತದೆ.

**೨. ಆನಂದ ತತ್ತ್ವ**

ಮೂಲ ಕೃತಿಯನ್ನು ಓದಿದಾಗ ದೊರೆಯುವಂಥ ಆನಂದ ಅನುವಾದವನ್ನು ಓದುವವನಿಗೂ ದೊರೆಯುವಂತಾಗಬೇಕು ಎಂಬುದು ಇದರ ಆಶಯ. ಆದರೆ, ಈ ತತ್ತ್ವ (ಹಾಗೂ ಇತರ ತತ್ತ್ವಗಳೂ) ವಿಧೇಯತಾ ತತ್ತ್ವಕ್ಕೆ ಹೊಂದಿಕೊಂಡು ಹೋಗಬೇಕಾಗಿದೆ ಎಂಬುದನ್ನು ಗಮನಿಸಬೇಕು. ಅಂದರೆ, ಅನುವಾದ ಆಕರ್ಷಕವಾಗಿರಬೇಕೆಂಬ ಕಾರಣಕ್ಕಾಗಿಯೇ ಇರುವುದನ್ನು ಬಿಡುವುದು, ಇಲ್ಲದ್ದನ್ನು ತಂದು ಸೇರಿಸುವುದು. ಸರಳವಾಗಿ ಇರುವುದನ್ನು ಅಲಂಕೃತವಾಗಿಸುವುದು, ಅಲಂಕೃತವಾಗಿ ಇರುವುದನ್ನು ಸರಳವಾಗಿಸುವುದು, ಸುಲಭವಾಗಿರುವುದನ್ನು ಕ್ಲಿಷ್ಟವಾಗಿಸುವುದು, ಕ್ಲಿಷ್ಟವಾಗಿರುವುದನ್ನು ಸುಲಭವಾಗಿಸುವುದು – ಇವೇ ಮೊದಲಾದ ಕಾರ್ಯಗಳಲ್ಲಿ ತೊಡಗಬಾರದು.

**೩. ಮೂಲಾಭಾಸ ತತ್ತ್ವ**

ಅನುವಾದದ ಓದುಗನಿಗೆ ತಾನೊಂದು ಭಾಷಾಂತರವನ್ನು ಓದುತ್ತಿದ್ದೇನೆಂಬ ಭಾವ ಮೂಡದಂತೆ, ಉದ್ದಿಷ್ಟ ಭಾಷೆಯಲ್ಲಿಯೇ ಮೂಲತಃ ರಚಿತವಾದ ಕೃತಿಯೋ ಎಂಬ ಅನುಭವ ಮೂಡುವಂತೆ ಅನುವಾದ ತುಂಬ ಸಹಜವಾಗಿ ಹಾಗೂ ಚೆನ್ನಾಗಿ ಓದಿಸಿಕೊಳ್ಳಬೇಕೆಂಬುಂದು ಇದರ ಆಶಯ.

**೪. ಅನುರೂಪತಾ ತತ್ತ್ವ**

ಗುಣದಲ್ಲಿ ಮಾತ್ರವಲ್ಲದೆ ಗಾತ್ರದಲ್ಲಿಯೂ ಅನುವಾದ ಮೂಲಕ್ಕೆ ಅನುರೂಪವಾಗಿರಬೇಕೆಂಬದನ್ನು ಈ ತತ್ವ ಒತ್ತಿ ಹೇಳುತ್ತದೆ. ಗುಣ ಎಂದಾಗ ಮೂಲದ ಭಾವಾಂಶ, ಚಿಂತನಾಂಶ, ರೂಪಾಂಶಗಳೆಲ್ಲ ಅನುವಾದದಲ್ಲಿಯೂ ಮೈದಳೆಯಬೇಕೆಂದು ಅರ್ಥ ಮಾಡಿಕೊಳ್ಳಬೇಕು. ಅಂತೆಯೇ, ಗಾತ್ರ ಎಂದಾಗ ಮೂಲಕ್ಕಿಂತ ತೀರ ದೊಡ್ಡದಾಗಲಿ ಆಗಬಾರದು ಎಂದು ಅಭಿಪ್ರಾಯ.

**೫. ಪರಿಹಾರ ತತ್ತ್ವ**

ಮೂಲದ ವೈಶಿಷ್ಟ್ಯಗಳೆಲ್ಲ ಅನುವಾದದಲ್ಲಿ ಒಳಗೊಂಡಿರಬೇಕೆಂಬುದು ನಿಜವಾದರೂ, ಭಾಷೆಗಳ ವಿಭಿನ್ನತೆ ಹಾಗೂ ತಮ್ಮವೇ ಆದ ಸೀಮಿತಗಳಿಂದಾಗಿ ಅನೇಕ ಸೂಕ್ಷ್ಮಾಂಶಗಳು ನುಣುಚಿಕೊಂಡು ಬಿಡುತ್ತವೆ – ಅದರಲ್ಲಿಯೂ ಕಾವ್ಯಾನುವಾದದಲ್ಲಿ. ಈ ಕೊರತೆಯನ್ನು ಇನ್ನೊಂದು ರೂಪದಲ್ಲಿ ತುಂಬಿಕೊಡಬೇಕೆಂಬುದನ್ನು ಈ ತತ್ತ್ವ ಒತ್ತಿ ಹೇಳುತ್ತದೆ.

**ಅನುವಾದದ ಪ್ರಕಾರಗಳು**

ಅನುವಾದದ ಪ್ರಕಾರಗಳಲ್ಲಿ ಮುಖ್ಯವಾದವು

1. ಶಬ್ದಾನುವಾದ
2. ವಿಸ್ತಾರಾನುವಾದ
3. ನಿಕಟಾನುವಾದ
4. ಭಾವಾನುವಾದ
5. ಸಾರಾನುವಾದ
6. ಸರಳಾನುವಾದ
7. ರೂಪಾಂತರ
8. ಅರ್ಥಾನುವಾದ

**(೧) ಶಬ್ದಾನುವಾದ**

ಮೂಲದ ಶಬ್ದಕ್ಕೆ ಬದಲಾಗಿ ಶಬ್ದವನ್ನು ಇಟ್ಟುಕೊಂಡು ಹೋಗುವುದನ್ನು ಶಬ್ದಾನುವಾದವೆನ್ನುತ್ತಾರೆ. ಮೊದಲ ನೋಟಕ್ಕೆ ಇದು ಸುಲಭವೆಂದು ತೋರಿದರೂ, ವಾಸ್ತವವಾಗಿ ತುಂಬ ಕಷ್ಟದ್ದು, ಅನೇಕ ವೇಳೆ, ಮಾತಿನ ಅರ್ಥವನ್ನು ಮೀರಿದ ಭಾವವನ್ನು ಗ್ರಹಿಸಬೇಕಾಗಿ ಬರುವುದರಿಂದ, ಶಬ್ದಾನುವಾದ ತುಂಬ

ಒರಟಾಗಿಯೂ ಕಾಣಬಹುದು. ಶೇಷಾರ್ಥಗಳು, ನುಡಿಗಟ್ಟುಗಳು, ಗಾದೆಗಳು, ಒಗಟುಗಳು, ಸಾಮಾಜಿಕ– ಧಾರ್ಮಿಕ ವಿಧಿ-ನಿಷೇಧಗಳು, ದೇಸಿಗಳು, ವ್ಯಾಕರಣ ಪ್ರಕ್ರಿಯೆಗಳು–ಇವೆಲ್ಲ ಶಬ್ದಾನುವಾದಕ್ಕೆ ಅಡ್ಡಿಗಳನ್ನೊಡ್ಡುತ್ತವೆ.

**(೨) ವಿಸ್ತಾರಾನುವಾದ**

ಮೂಲದಲ್ಲಿ ಇರುವಷ್ಟೇ ಶಬ್ದಗಳು ಅನುವಾದದಲ್ಲಿ ಇರಬಹುದು; ಮೂಲಕ್ಕಿಂತ ಅನುವಾದದಲ್ಲಿ ಹೆಚ್ಚು ಶಬ್ದಗಳಿರಬಹುದು; ಕಡಿಮೆ ಶಬ್ದಗಳಿರಬಹುದು. ಅಂದರೆ, ಭಾಷೆಯ ಜಾಯಮಾನದಿಂದಾಗಿ ಏರ್ಪಡುವ ವಿಸ್ತಾರವನ್ನು ವಿಸ್ತಾರಾನುವಾದವೆಂದು ಪರಿಗಣಿಸುವುದಿಲ್ಲ. ಆದರೆ, ಭಾವಸ್ಪಷ್ಟನೆ, ಸಂವರ್ಧನೆ, ಪೋಷಣೆಗಳ ದೃಷ್ಟಿಯಿಂದ ಸೇರಿಸಲಾಗುವ ಒಂದೆರಡು ಮಾತುಗಳನ್ನೋ ವಾಕ್ಯಾಂಶಗಳನ್ನೋ ಅಥವಾ ವಾಕ್ಯಗಳನ್ನೋ ಅಗತ್ಯವೆಂದು ಎಲ್ಲ ಸಂದರ್ಭಗಳಲ್ಲಿಯೂ ಹೇಳಲಾಗುವುದಿಲ್ಲ. ಇಂಥವನ್ನು ವಿಸ್ತಾರಾನುವಾದವೆಂದು ಕರೆಯುತ್ತಾರೆ. ಶಬ್ದವಿಸ್ತಾರ, ಭಾವವಿಸ್ತಾರ, ವ್ಯಾಖ್ಯಾನ ಮತ್ತು ಪ್ರಕ್ಷೇಪ ಎಂದು ನಾಲ್ಕು ಬಗೆಯಾಗಿ ಇದನ್ನು ವರ್ಗೀಕರಿಸಬಹುದು.

**(೩) ನಿಕಟಾನುವಾದ**

ವಸ್ತು, ರೀತಿ ಮತ್ತು ಶೈಲಿಯ ದೃಷ್ಟಿಯಿಂದ ಮೂಲಕ್ಕೆ ಆದಷ್ಟು ನಿಕಟವಾಗಿರುವ, ಬಹುಮಟ್ಟಿಗೆ ಮೂಲಕ್ಕೆ ಯಾವುದನ್ನೂ ಸೇರಿಸದೆ, ಏನನ್ನೂ ಕೈಬಿಡದೆ ಮೂಲದ ಹಾದಿಯಲ್ಲೇ ನಡೆಯುವ ಅನುವಾದವನ್ನು ನಿಕಟಾನುವಾದ ಎನ್ನುತ್ತಾರೆ.

**(೪) ಭಾವಾನುವಾದ**

ಭಾವವನ್ನು ಅನುವಾದಿಸಿಕೊಳ್ಳುವುದಕ್ಕೆ ಈ ಪ್ರಕಾರದಲ್ಲಿ ಪ್ರಾಧಾನ್ಯವಿದೆಯೆಂದು ಭಾವಿಸಬಹುದಾಗಿದೆಯಾದರೂ, ಇಂದು ಇದು ಮನಸ್ಸಿಗೆ ತೋಚಿದಂತೆ ಅನುವಾದಿಸುವ ಪ್ರವೃತ್ತಿಗೆ ಪರ್ಯಾಯನಾಮವಾಗಿ ಬಿಟ್ಟಿದೆ. ಭಾವಾನುವಾದವೆಂಬ ಹೆಸರಿನಲ್ಲಿ ಮೆರೆದಾಡುತ್ತಿರುವ ಕೃತಿಗಳಲ್ಲಿ ಮೂಲದ ಭಾವವೊಂದನ್ನು ಬಿಟ್ಟು ಬೇರೇನು ಬೇಕಾದರೂ ಇರಬಹುದು ಎನ್ನುವಂತಾಗಿದೆ. ಆದರೆ, ಇದು ಈ ಪ್ರಕಾರದ ದುರುಪಯೋಗ, ಅನೇಕ ವೇಳೆ, ಶಬ್ದಗಳನ್ನು ಬದಿಗಿರಿಸಿ ಭಾವದ ಬೆನ್ನು ಹತ್ತಬೇಕಾಗುತ್ತದೆ ಎಂಬುದನ್ನೂ ಶಬ್ದಾನುವಾದದ ಸಂದರ್ಭದಲ್ಲಿ ಈಗಾಗಲೇ ಗಮನಿಸಿದ್ದೇವೆ. ಉದಾಹರಣೆಗೆ "All that glitters is not gold" ಎಂಬುದನ್ನು "ಹೊಳೆಯುವುದೆಲ್ಲ ಹೊನ್ನಲ್ಲ" ಎಂದು ಅಳವಡಿಸಿಕೊಂಡಾಗ ಅದು ಶಬ್ದಾನುವಾದವಾದರೆ, "ಬೆಳ್ಳಗಿರುವುದೆಲ್ಲ ಹಾಲಲ್ಲ" ಎಂದು ಇಟ್ಟುಕೊಂಡಾಗ ಅದು ಭಾವಾನುವಾದವಾಗುತ್ತದೆ.

**(೫) ಸಂಗ್ರಹಾನುವಾದ**

ಮಹತ್ವದ ಕೃತಿಗಳನ್ನು ಗುಣಕ್ಕಾಗಲೀ, ಗಾತ್ರಕ್ಕಾಗಲೀ ಲೋಪ ಬರದಂತೆ, ಸ್ವಾರಸ್ಯ ಉಳಿದು ಬರುವಂತೆ ಸಂಗ್ರಹಿಸಿಕೊಡುವಂತೆ ಅನುವಾದ ಮಾಡುವ ವಿಧಾನವನ್ನು ಸಂಗ್ರಹಾನುವಾದ ಎನ್ನುತ್ತಾರೆ. ಹೆಸರೇ ಸೂಚಿಸುವಂತೆ ಇಲ್ಲಿ ಸಂಗ್ರಹ ಮತ್ತು ಅನುವಾದ ಕಾರ್ಯಗಳೆರಡನ್ನೂ ಅನುವಾದಕ ನಿರ್ವಹಿಸಬೇಕಾಗುತ್ತದೆ. ಔಚಿತ್ಯವನ್ನರಿತು ಸಂಗ್ರಹ ಮಾಡಿ, ಅಗತ್ಯವಾದಲ್ಲಿ ಸಂಬಂಧ ಪೂರಕ ಅಂಶಗಳನ್ನು ಸೇರಿಸಿ, ಗಾತ್ರದಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದಾಗಿಯೇ ಇರುವಂತೆ ನೋಡಿಕೊಳ್ಳುವ ಹೊಣೆಯೂ ಅನುವಾದಕನ ಮೇಲೆ ಇರುತ್ತದೆ. ಭಾಷೆಯ ಅಗತ್ಯಗಳಿಂದಾಗುವ ವಿಸ್ತಾರ ಹೇಗೆ ವಿಸ್ತಾರಾನುವಾದ ಎನ್ನಿಸಿಕೊಳ್ಳುವುದಿಲ್ಲವೋ ಹಾಗೆಯೇ ಅಂಥ ಸಂಗ್ರಹವೂ ಸಂಗ್ರಹಾನುವಾದ ಎನ್ನಿಸಿಕೊಳ್ಳುವುದಿಲ್ಲ. ಮುಖ್ಯವಾಗಿ ಇದರಲ್ಲಿ ಸುತ್ತು ಬಳಸಿನ ಹೇಳಿಕೆಗಳಿಗೆ, ಭಾವವಿಸ್ತರಣಕ್ಕೆ, ಅಲಂಕಾರಿಕ ವಿಭವಗಳಿಗೆ, ಪುನರುಕ್ತಿಗಳಿಗೆ ಅವಕಾಶವಿರುವುದಿಲ್ಲ.

**(೬) ರೂಪಾಂತರ**

ದೇಶಕಾಲಗಳಿಗೆ ಸಂಬಂಧಿಸಿದಂತೆ ಮೂಲ ಕೃತಿಯನ್ನು ಮತ್ತೊಂದು ಭಾಷೆಗೆ ಅಳವಡಿಸಿಕೊಳ್ಳುವುದು ರೂಪಾಂತರ ಎನ್ನಿಸಿಕೊಳ್ಳುತ್ತದೆ. ಭಾಷಿಕ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕಾರಣಗಳಿಂದಾಗಿ ಅನೇಕ ವೇಳೆ ಯಾವ ಒಂದು ಅಂಶವನ್ನೂ ಬಿಡದಂತೆ ಎಲ್ಲ ಕೃತಿಗಳನ್ನೂ ಅನುವಾದಿಸಿ ಕೊಳ್ಳುವುದು ಸಾಧ್ಯವಾಗುವುದಿಲ್ಲ. ಅಂಥ ಸಂದರ್ಭಗಳಲ್ಲಿ ಮೂಲದ ಸತ್ವ, ಶೈಲಿಗಳನ್ನು ಅನುಕರಿಸಿ ರಚಿತವಾಗುವ ಕೃತಿಯೇ ರೂಪಾಂತರ. ಅಂದರೆ, ಅಂಕಿತನಾಮಗಳನ್ನು ಬದಲಾಯಿಸಿದರಷ್ಟೇ ರೂಪಾಂತರವಾಗುವುದಿಲ್ಲ. ದೇಶಕಾಲ ಬಾಧಿತವಾದ ಅಂತಃಸತ್ವವನ್ನುಳ್ಳ ಕೃತಿಗಳನ್ನು ಇನ್ನೊಂದು ಪರಿಸರಕ್ಕೆ ಅಳವಡಿಸುವ ಯತ್ನ ಇದಾಗಿರುತ್ತದೆ. ಅಂದರೆ, ಅನುವಾದಕ ಇಲ್ಲಿ ಸಾಕಷ್ಟು ಸ್ವಾತಂತ್ರ್ಯ ವಹಿಸುತ್ತಾನೆ.

**(೭) ಸರಳಾನುವಾದ**

ವಿದ್ಯಾರ್ಥಿಗಳು, ಜನಸಾಮಾನ್ಯರು, ಮಕ್ಕಳು – ಇಂಥ ವಿಶಿಷ್ಟ ವರ್ಗದ ಓದುಗರನ್ನು ದೃಷ್ಟಿಯಲ್ಲಿರಿಸಿಕೊಂಡು ಆದಷ್ಟು ಸರಳವಾದ ಭಾಷೆಯಲ್ಲಿ ಅನುವಾದವನ್ನು ಕೊಡುವುದೇ ಸರಳಾನುವಾದ. ಇದು ಎರಡು ಭಿನ್ನ ಭಾಷೆಗಳ ನಡುವೆ ನಡೆಯುವಂತೆಯೇ ಒಂದೇ ಭಾಷೆಯಲ್ಲಿಯೂ ನಡೆಯಬಹುದು. ಶೈಕ್ಷಣಿಕ ಕ್ಷೇತ್ರದಲ್ಲಂತೂ ಸರಳಾನುವಾದ ನಿತ್ಯದ ಅಗತ್ಯಗಳಲ್ಲಿ ಒಂದಾಗಿರುತ್ತದೆ.

**೮) ಅರ್ಥಾನುವಾದ**

ಕೃತಿಯ ಭಾವ, ಧ್ವನಿ ಮತ್ತು ಆಶಯಗಳಿಗೆ ವಿಶೇಷವಾಗಿ ಗಮನ ಕೊಡದೆ, ಮೂಲದ ಅರ್ಥವನ್ನು ಯಥಾವತ್ತಾಗಿ ಕಂಡರಿಸುವ ವಿಧಾನವನ್ನು ಅರ್ಥಾನುವಾದ ಎಂದು ಕರೆಯಲಾಗಿದೆ. ಅರ್ಥದ ಸಮಸ್ಯೆ ಬಗೆಹರಿದರೆ ಅನುವಾದದ ಬಹುಪಾಲು ಸಮಸ್ಯೆಗಳೆಲ್ಲ ಬಗೆಹರಿದಂತೆಯೇ, ಹಾಗಲ್ಲದೆ, ಈ ಕೀಲಿಕೈಯೇ ದೊರೆಯದೆ ಹೋದರೆ ಆಗುವುದೆಲ್ಲ ಅನರ್ಥ, ಅನಾಹುತ.

**ಅನುವಾದದ ಸಮಸ್ಯೆಗಳು**

ಭಾಷೆಗಳ ನಡುವಣ ಅಸಾಮಂಜಸ್ಯ, ಭಿನ್ನ ಪರಿಸರಗಳು, ಭಿನ್ನ ಸಂಸ್ಕೃತಿಗಳು ಮತ್ತು ಭಿನ್ನ ವ್ಯಕ್ತಿತ್ವಗಳು ಅನುವಾದದ ಕ್ಷೇತ್ರದಲ್ಲಿ ಸಮಸ್ಯೆಗಳನ್ನು ಸೃಷ್ಟಿಸುತ್ತವೆ. ಈ ಸಮಸ್ಯೆಗಳನ್ನು ಬಾಹ್ಯ ಮತ್ತು ಆಂತರಿಕ ಸಮಸ್ಯೆಗಳು ಎಂದು ವರ್ಗೀಕರಿಸಬಹುದು. ಭಾಷೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಬಾಹ್ಯ ಸಮಸ್ಯೆಗಳೆಂದೂ, ವ್ಯಕ್ತಿತ್ವ ಸಂಬಂಧವಾದ ಸಮಸ್ಯೆಗಳನ್ನು ಆಂತರಿಕ ಸಮಸ್ಯೆಗಳೆಂದೂ ಕರೆಯಲಾಗಿದೆ.

**೧. ಬಾಹ್ಯ ಸಮಸ್ಯೆಗಳು**

ಭಾಷಾ ಸಂಬಂಧವಾದ ಸಮಸ್ಯೆಗಳನ್ನು ಕೋಶಾತ್ಮಕ ಮತ್ತು ವ್ಯಾಕರಣಾತ್ಮಕ ಎಂದು ವಿಂಗಡಿಸಿಕೊಳ್ಳಬಹುದು.

**ಅ) ಕೋಶಾತ್ಮಕ ಸಮಸ್ಯೆಗಳು**

ಕೋಶದಲ್ಲಿ ಕೊಟ್ಟಿರುವ ಅನೇಕ ಅರ್ಥಗಳಲ್ಲಿ ಉಚಿತವಾದ ಅರ್ಥವೇನೆಂಬುದನ್ನು ಕಂಡುಕೊಳ್ಳುವಲ್ಲಿ ಅನುವಾದಕ ತುಂಬ

ವಿವೇಚನೆಯಿಂದ ವರ್ತಿಸಬೇಕು. ಈ ವಿವೇಚನೆಯ ಅಭಾವದಿಂದ ಆಗುವ ತಪ್ಪುಗಳನ್ನು ಸಮಸ್ಯೆಗಳು ಎನ್ನಲಾಗುವುದಿಲ್ಲ.

**(ಆ) ವ್ಯಾಕರಣ ಸಮಸ್ಯೆಗಳು**

ಅಭಿವ್ಯಕ್ತಿ ಅಥವಾ ನಮ್ಮ ಅಭಿಪ್ರಾಯ ಸರಿಯಾಗಿ ಹಾಗೂ ಸಹಜವಾದ ರೀತಿಯಲ್ಲಿ ಇನ್ನೊಬ್ಬರನ್ನು ಸೇರಬೇಕಾದರೆ ವಾಕ್ಯರಚನೆ ಸರಿಯಾಗಿ, ಸಹಜವಾಗಿ ಇರಬೇಕು. ಒಂದೊಂದು ಭಾಷೆಯೂ ತನ್ನದೇ ಆದ ರೀತಿಯಲ್ಲಿ ಇದನ್ನು ಬೆಳೆಸಿಕೊಂಡಿರುತ್ತದೆ. ಇದನ್ನೇ ನಾವು ಭಾಷೆಯ ಜಾಯಮಾನ ಎನ್ನುತ್ತೇವೆ. ಅನುವಾದಕ ಇದನ್ನು ಚೆನ್ನಾಗಿ ತಿಳಿದುಕೊಂಡಿರಬೇಕು.

**(ಇ) ಸಾಂಸ್ಕೃತಿಕ ಸಮಸ್ಯೆಗಳು**

ಭಿನ್ನ ಸಂಸ್ಕೃತಿಗಳೂ ಅನೇಕ ಸಮಸ್ಯೆಗಳನ್ನು ಸೃಷ್ಟಿಸುತ್ತವೆ. ಎದೆ ಹೊಡೆದುಕೊಳ್ಳುವುದು, ಬಾಯಿ ಬಡಿದುಕೊಳ್ಳುವುದು, ತಲೆ ಕೆದರಿ ಕೊಳ್ಳುವುದು ಇಂಥ ಕೆಲವು ಚರ್ಯೆಗಳು ಕೆಲವು ಸಂಸ್ಕೃತಿಗಳಲ್ಲಿ ಆನಂದಸೂಚಕ ಸಂಗತಿಗಳಾಗಿವೆ. ಆದ್ದರಿಂದ ಅನುವಾದಕ ಸಾಂಸ್ಕೃತಿಕ ಸಮಸ್ಯೆಗಳ ವಿಷಯದಲ್ಲಿ ತುಂಬ ಎಚ್ಚರದಿಂದ ಇರಬೇಕಾಗುತ್ತದೆ.

**೨. ಆಂತರಿಕ ಸಮಸ್ಯೆಗಳು**

ಅನುವಾದಕನ ವ್ಯಕ್ತಿತ್ವ ಮೂಲ ಲೇಖಕನ ವ್ಯಕ್ತಿತ್ವದ ಮಟ್ಟಕ್ಕೆ ಏರಲಾರದೆ ಹೋದಾಗ ಅಥವಾ ಅದನ್ನು ಮೀರಿ ನಿಂತಾಗಲೂ ಮಸ್ಯೆಗಳು ಉದ್ಭವಿಸುತ್ತವೆ. ಇದನ್ನು ಆಂತರಿಕ ಸಮಸ್ಯೆಗಳು ಎಂದು ಕರೆಯುತ್ತಾರೆ. ಈ ಎರಡು ಸ್ಥಿತಿಗಳೂ ಅತಿರೇಕಗಳೇ. ಇವುಗಳಲ್ಲಿ ಮೊದಲನೆಯದನ್ನು 'ಅಧೋನುವಾದ' (under translation) ಎಂದೂ, ಎರಡನೆಯದನ್ನು 'ಊರ್ಧ್ವಾನುವಾದ' (over translation) ಎಂದೂ ಕರೆಯುತ್ತಾರೆ. ಆದರೆ, ಅನುವಾದಕನ ಪ್ರತಿಭೆ–ಸಾಮರ್ಥ್ಯಗಳ ಅಭಾವ ಇದಕ್ಕೆ ಕಾರಣವಾಗಿರದೆ ಭಾಷಿಕ ಸಾಂಸ್ಕೃತಿಕ ಕಾರಣಗಳಿಂದಾಗಿ ಸಮಾನ ಸೃಷ್ಟಿ ಸಾಧ್ಯವಾಗದ ಸಂದರ್ಭಗಳು ಮಾತ್ರ ಈ ಸಮಸ್ಯೆಗಳ ವ್ಯಾಪ್ತಿಗೆಬರುತ್ತವೆ.

**೩. ಇತರ ಸಮಸ್ಯೆಗಳು**

ಯಾರಿಗಾಗಿ – ಅಂದರೆ ವಿದ್ವಾಂಸರಿಗಾಗಿಯೇ, ಜನಸಾಮಾನ್ಯರಿಗಾಗಿಯೇ, ವಿದ್ಯಾರ್ಥಿಗಳಿಗಾಗಿಯೇ ಅಥವಾ ಬಾಲಕರಿಗಾಗಿಯೇ ಮತ್ತು ಯಾವ ಪ್ರಕಾರವನ್ನು ಆಶ್ರಯಿಸಿ–ವಿದ್ವತ್ ಪತ್ರಿಕೆಯೇ, ಜನಪ್ರಿಯ ಪತ್ರಿಕೆಯೇ, ವಿದ್ಯಾರ್ಥಿಗಳಿಗಾಗಿ ಬರೆಯುವ ಪಠ್ಯಪುಸ್ತಕವೇ, ಜನಪ್ರಿಯ ವಿಜ್ಞಾನ ಮಾಲಿಕೆಯ ಪುಸ್ತಕವೇ–ಅನುವಾದ ಮಾಡುತ್ತಿದ್ದೇವೆ ಎಂಬುದೂ ಕೆಲವು ಸಮಸ್ಯೆಗಳನ್ನು ಸೃಷ್ಟಿಸುತ್ತವೆ. ಇವುಗಳಲ್ಲಿ ಮೊದಲನೆಯದನ್ನು 'ಲಕ್ಷ್ಯ'ವೆಂದೂ, ಎರಡನೆಯದನ್ನು 'ಮಾಧ್ಯಮ'ವೆಂದೂ ಹೆಸರಿಸಲಾಗಿದೆ.

**೪. ವಿಜ್ಞಾನ ಮತ್ತು ಮಾನವಿಕ ಕೃತಿಗಳ ಅನುವಾದದ ಸಮಸ್ಯೆಗಳು**

ವಿಜ್ಞಾನ ಮತ್ತು ಮಾನವಿಕ ಕ್ಷೇತ್ರಗಳ ವಿವಿಧ ವಿಷಯಗಳು ತಮ್ಮದೇ ಆದ ಜಾರ್ಗನ್ ಅಥವಾ ವಿಷಯನಿಷ್ಠ ಶೈಲಿಯನ್ನೂ, ಪಾರಿಭಾಷಿಕ ಪದಗಳನ್ನೂ ಹೊಂದಿರುತ್ತವೆ. ವಿಷಯವನ್ನು ಸಮಗ್ರವಾಗಿ ತಿಳಿದುಕೊಂಡಿರುವ ಹಾಗೂ ಭಾಷೆಯ ಮೇಲೆ ವಿಶಿಷ್ಟ ಪ್ರಭುತ್ವವನ್ನು ಹೊಂದಿರುವ ವ್ಯಕ್ತಿಗಳು ಮಾತ್ರವೇ ಈ ಕೆಲಸಕ್ಕೆ ಕೈ ಹಾಕಬಹುದು. ಉದ್ದಿಷ್ಟ ಭಾಷೆಯನ್ನು ವಿವಿಧ ವಿಷಯಗಳ ನಿರೂಪಣೆಗೆ ಹೊಂದುವಂತೆ ಕಸಿಮಾಡುವ ಹಾಗೂ ಅರ್ಥಪೂರ್ಣ ಪಾರಿಭಾಷಿಕ ಪದಗಳನ್ನು ಸೃಷ್ಟಿಸುವ ಸಾಮರ್ಥ್ಯ ಅನುವಾದಕನಿಗೆ ಇರಬೇಕಾಗುತ್ತದೆ.

**ಸಮಾರೋಪ**

ಯಾವುದೇ ಕೃತಿ ಕಾಲ ದೇಶಗಳನ್ನು ಮೀರಿ ಅನುವಾದದ ಮೂಲಕ ಅನಾವರಣಗೊಳ್ಳುತ್ತಿರುತ್ತದೆ. ಆಕರ ಭಾಷೆಯಲ್ಲಿ ಕೃತಿ ಹುಟ್ಟಿಕೊಂಡ ಕಾಲಕ್ಕೂ ಅದು ಯಾವುದೋ ಒಂದು ನಿರ್ದಿಷ್ಟ ಭಾಷೆಯಲ್ಲಿ ಅನುವಾದಗೊಳ್ಳುವುದಕ್ಕೂ ಕಾಲ, ದೇಶಗಳ ಅಂತರ ಇದ್ದೇ ಇರುತ್ತದೆ. ಹೀಗೆ ಅಂತರ ಇದ್ದಾಗಲೂ ಭಾಷಾಂತರದ ಮೂಲಕ ಸ್ವೀಕಾರವಾಗುವುದಕ್ಕೆ ಇರುವ ಮುಖ್ಯ ಕಾರಣವೇ ಆಕರ ಭಾಷೆಯ ಕೃತಿಯ ಸಮಕಾಲೀನ ಗ್ರಹಿಕೆ.

ದೈನಂದಿನ ಬದುಕಿನಲ್ಲಿ ನಡೆಯುವ ವಿದ್ಯಮಾನಗಳಲ್ಲಿ ಬಹುತೇಕ ಭಾಷಾಂತರವೇ ತುಂಬಿಕೊಂಡಿದೆ. ಭಾರತದಂತಹ ಬಹುಭಾಷಿಕ ಸಂದರ್ಭದಲ್ಲಿ ಅಪ್ರಜ್ಞಾಪೂರ್ವಕವಾಗಿ ಭಾಷಾಂತರ ಪ್ರಕ್ರಿಯೆ ನಿರಂತರವಾಗಿದೆ. ಬೆಳಿಗ್ಗೆ ಎದ್ದು ಪತ್ರಿಕೆ ಹಂಚುವ, ಹಾಲುತರುವ ಹುಡುಗರು ಬಳ್ಳಾರಿ ಪ್ರದೇಶದಲ್ಲಿ ತೆಲುಗು, ಕನ್ನಡ; ಮಂಗಳೂರು ಪ್ರದೇಶಗಳಲ್ಲಿ ತುಳು, ಕನ್ನಡ; ಕಾಸರಗೋಡು ಪ್ರದೇಶದಲ್ಲಿ ಮಲಯಾಳಂ, ಕನ್ನಡ; ಬೆಳಗಾವಿ ಪ್ರದೇಶದಲ್ಲಿ ಮರಾಠಿ, ಕನ್ನಡ – ಹೀಗೆ ಎರಡೂ ಭಾಷೆಗಳನ್ನು ವ್ಯವಹಾರಿಕವಾಗಿ ಬಳಸುತ್ತಾರೆ. ಆಯಾ ಭಾಷೆಗಳಲ್ಲಿ ಹೇಳಿದ್ದನ್ನು ಕನ್ನಡದಲ್ಲಿ ಅರ್ಥಮಾಡಿಕೊಳ್ಳುವ ಭಾಷಾ ತಿಳುವಳಿಕೆ ಸ್ಥಳೀಯರಲ್ಲೂ ಇರುತ್ತದೆ. ಹೀಗೆ ಈ ತಿಳುವಳಿಕೆಯಿಂದ ಅರ್ಥೈಸಿಕೊಂಡು ಪ್ರತಿಕ್ರಿಯಿಸುವಲ್ಲಿಯೂ ಭಾಷಾಂತರ ಪ್ರಕ್ರಿಯೆ ನಡೆದಿರುತ್ತದೆ.

ವಿವಿಧ ಭಾಷೆ, ದೇಶ, ಸಂಸ್ಕೃತಿಗಳು ಸಾಹಿತ್ಯಕವಾಗಿ, ಸಾಮಾಜಿಕವಾಗಿ, ಸಾಮೂಹಿಕವಾಗಿ, ಸಾಂಸ್ಕೃತಿಕವಾಗಿ ಒಂದುಗೂಡಲು ಅನುವಾದ ಸಾಹಿತ್ಯ ಕಾರಣವಾಗಿರುವುದನ್ನು ತಿಳಿಯಬೇಕಾಗಿದೆ. ರವೀಂದ್ರನಾಥ ಠಾಕೂರ್ ಅವರಿಗೆ ನೊಬೆಲ್ ಬಹುಮಾನ ತಂದುಕೊಟ್ಟ ಶ್ರೇಷ್ಠ ಅನುವಾದ ಕೃತಿ(ಇಂಗ್ಲಿಷ್‌ಗೆ) 'ಗೀತಾಂಜಲಿ'ಯು ಸಹ ಅನುವಾದ ಸಾಹಿತ್ಯವಲ್ಲವೇ?

**ಗ್ರಂಥಋಣ**


1. ಅನುವಾದ ಸಾಹಿತ್ಯ – (ಸಂ.) ಡಾ. ಎ ಮೋಹನ ಕುಂಟಾರ್, ಕಸಾಪ ಪ್ರಕಟಣೆ, ಪ್ರಥಮ ಮುದ್ರಣ: ೨೦೧೫, ಐಎಸ್‌ಬಿಎನ್–೯೭೮–೯೩–೮೨೪೪೬–೯೮–೯
2. ಕನ್ನಡದಲ್ಲಿ ಅನುವಾದ ನಾಟಕಗಳು (ಸ್ವಾತಂತ್ರ್ಯಪೂರ್ವ) – ಬಿ ಎಸ್ ಶಿವಕುಮಾರ್, ಪಿಹೆಚ್‌ಡಿ ಮಹಾಪ್ರಬಂಧ (ಅಪ್ರಕಟಿತ), ಮದರಾಸು ವಿವಿ, ಆಗಸ್ಟ್ ೨೦೦೦.
3. ಕನ್ನಡದಲ್ಲಿ ಅನುವಾದ ಸಾಹಿತ್ಯ – ಎ ಆರ್ ಮಂಜುನಾಥ್, ಪಿಹೆಚ್‌ಡಿ ಮಹಾಪ್ರಬಂಧ (ಅಪ್ರಕಟಿತ), ೧೯೯೯.
4. ಎನ್ ಎಸ್ ಲಕ್ಷ್ಮೀನಾರಾಯಣ ಭಟ್ಟರ ಕಾವ್ಯ (ಸೃಜನ ಮತ್ತು ಅನುವಾದ) – ಸುಮಿತಾ ಜಿ ಜಕ್ಲಣ್ಣನವರ, ಪಿಹೆಚ್‌ಡಿ ಮಹಾಪ್ರಬಂಧ (ಅಪ್ರಕಟಿತ), ಕವಿವಿ, ೨೦೧೪.
5. ಕನ್ನಡ ಸಾಹಿತ್ಯದಲ್ಲಿ ಭಾಷಾಂತರ ಮತ್ತು ಅನುವಾದ – ಮುನಿರಾಜು ಕೆ (ಲೇಖನ)
6. ಅನುವಾದ: ಆಧುನಿಕ ಜಗತ್ತಿನಲ್ಲಿ – ಡಾ. ಪ್ರಧಾನ್ ಗುರುದತ್ತ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ ಪ್ರಕಾಶನ, ಪರಿಷ್ಕೃತ ಮುದ್ರಣ – ೨೦೨೧
7. ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ – ಡಾ. ಹರಿಕೃಷ್ಣ ಭರಣ್ಯ, ಸಪ್ನ ಬುಕ್ ಹೌಸ್, ಮೂರನೆಯ ಮುದ್ರಣ, ಅಕ್ಟೋಬರ್ ೨೦೨೧ (ಪಿಹೆಚ್‌ಡಿ ಮಹಾಪ್ರಬಂಧ, ಮದರಾಸು ವಿವಿ, ೧೯೮೩)ಐಎಸ್‌ಬಿಎನ್–೯೭೮–೯೩–೮೬೭೨೭೪–೦೪–೫